# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 670 (793) |
| ಸದಸ್ಯರ ಹೆಸರು : | ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ : | 22.02.2023 |
| ಉತ್ತರಿಸಬೇಕಾದ ಸಚಿವರು : | ಮಾನ್ಯ ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಡಿ.ಹೊಸಹಳ್ಳಿ ಗ್ರಾಮದ ಸರ್ವೆ ನಂ : 79 ಮತ್ತು 80 ರಲ್ಲಿ ಆದೇಶ ಸಂಖ್ಯೆ ಡಿ.ವಿ.ಸಿ 15 ಡಿಆರ್‌ಎಚ್, ದಿನಾಂಕ : 13/05/1973 ರಂತೆ ಹಾಗೂ ಆದೇಶ ಸಂಖ್ಯೆ : ಹೆಚ್.ಯು.ಡಿ 1 ಹೆಚ್‌ಎಹೆಚ್ 95 (I) ಮತ್ತು (II), ದಿನಾಂಕ : 18/08/1995 ರಂತೆ ನಿವೇಶನಗಳ ಹಂಚಿಕೆಗೆ ಭೂಸ್ವಾಧೀನಪಡಿಸಿಕೊಳ್ಳಲಾದ ಜಮೀನು ಎಷ್ಟು; (ವಿಸ್ತೀರ್ಣವಾರು ಮಾಹಿತಿಯನ್ನು ನೀಡುವುದು) ; | ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಡಿ.ಹೊಸಹಳ್ಳಿ ಗ್ರಾಮದ ಸರ್ವೆ ನಂ : 71/3 ಹಾಗೂ ಇತರೆಗಳಲ್ಲಿನ ಒಟ್ಟು.10-39-04 ಎಕರೆ ಜಮೀನು ಡಿ. ಹೊಸಹಳ್ಳಿ ಗ್ರಾಮದ ಸ್ಥಳಾಂತರಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಭೂಸ್ವಾಧೀನ ಕಾಯ್ದೆ 1894ರ, ಕಲಂ-4(1)ರಡಿ ಆದೇಶ ಸಂಖ್ಯೆ:ಎ7 ಜಿ.ಎ.ಸಿ 88/1961-62, ದಿನಾಂಕ:10.08.1962ರನ್ವಯ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಸದರಿ ಅಧಿಸೂಚನೆಯನ್ನು ವಿ.ಎಸ್.ಎಸ್ 198/1971-72, ದಿನಾಂಕ:15.10.1980ರ ಆದೇಶದನ್ವಯ ರದ್ದುಪಡಿಸಲಾಗಿದೆ. ಪುನಃ ಭೂಸ್ವಾಧೀನ ಪ್ರಕ್ರಿಯೆ ನಡೆದಿರುವುದಿಲ್ಲ.<br><br>ನಂತರ ಡಿ.ಹೊಸಹಳ್ಳಿ ಗ್ರಾಮದ ಸ್ಥಳಾಂತರಕ್ಕಾಗಿ ಸರ್ವೆ ನಂ:79 ರಲ್ಲಿ 15-00 ಎಕರೆ ಮತ್ತು 80 ರಲ್ಲಿ 04-36 ಎಕರೆ ಸರ್ಕಾರಿ ಗೋಮಾಳ ಜಮೀನನ್ನು ಮಂಜೂರು ಮಾಡಲಾಗಿದೆ. |
| (ಆ) | ಸದರಿ ಆದೇಶಗಳಂತೆ ಮದ್ದೂರು ತಾಲ್ಲೂಕಿನ ತಹಸೀಲ್ದಾರರು ದಿನಾಂಕ:12.02.1974 ರಂದು ಹಾಗೂ ಕಾರ್ಯನಿರ್ವಾಹಕ ಅಧಿಕಾರಿ, ಮದ್ದೂರು ತಾಲ್ಲೂಕು ಪಂಚಾಯಿತಿ ಇವರು ದಿನಾಂಕ:28.06.1997 ರಂದು ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ, ವಿಸ್ತೀರ್ಣ, ಫಲಾನುಭವಿವಾರು ವಿವರ ನೀಡುವುದು: | ಮದ್ದೂರು ತಹಶೀಲ್ದಾರ್ ಹಾಗೂ ಕ್ಷೇತ್ರಾಭಿವೃದ್ಧಿ ಅಧಿಕಾರಿ, ಮದ್ದೂರು ಇವರು ಹಂಚಿಕೆ ಮಾಡಿರುವ ನಿವೇಶನಗಳ ವಿವರ:<br><br>• ಒಟ್ಟು ನಿವೇಶನಗಳ ಸಂಖ್ಯೆ: 42<br>• ಹಂಚಿಕೆಯಾದ ನಿವೇಶನಗಳು: 25<br>• ಉಳಿದಿರುವ ನಿವೇಶನಗಳ ಸಂಖ್ಯೆ: 17 |
| (ಇ) | ಸರ್ಕಾರದ ವಿವಿಧ ಉದ್ದೇಶಕ್ಕಾಗಿ ಎಷ್ಟು ನಿವೇಶನಗಳನ್ನು ಮೀಸಲಿರಿಸಲಾಗಿದೆ: ನಂಬರ್ ವಾರು/ವಿಸ್ತೀರ್ಣವಾರು ವಿವರ ನೀಡುವುದು. | ಸರ್ಕಾರದ ವಿವಿಧ ಉದ್ದೇಶಕ್ಕಾಗಿ (ಅಂಗನವಾಡಿ ಮತ್ತು ಗ್ರಾಮ ಪಂಚಾಯಿತಿ) 02 ನಿವೇಶನಗಳನ್ನು ಮೀಸಲಿರಿಸಲಾಗಿದೆ. |
| (ಈ) | ಸರ್ಕಾರದ ವಿವಿಧ ಉದ್ದೇಶಗಳಿಗಾಗಿ ಮೀಸಲಿರಿಸಿದ ನಿವೇಶನಗಳನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುವುದು ನಿಜವೇ ಹಾಗಿದ್ದಲ್ಲಿ ಒತ್ತುವರಿ ನಿವೇಶನಗಳನ್ನು ತೆರವುಗೊಳಿಸುವಂತೆ ಕೋರಿ ಗ್ರಾಮಸ್ಥರು ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ : (ಅರ್ಜಿಗಳ ದಿನಾಂಕವಾರು ಮಾಹಿತಿಯನ್ನು ನೀಡುವುದು) | ಸರ್ಕಾರದ ವಿವಿಧ ಉದ್ದೇಶಗಳಿಗಾಗಿ ಮೀಸಲಿರಿಸಿದ ನಿವೇಶನಗಳನ್ನು ಯಾವುದೇ ಖಾಸಗೀ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುವುದಿಲ್ಲ ಹಾಗೂ ಒತ್ತುವರಿ ತೆರವುಗೊಳಿಸುವಂತೆ ಕೋರಿ ಗ್ರಾಮಸ್ಥರು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. |

| | | |
|---|---|---|
| (ಉ) | ಸದರಿ ಅರ್ಜಿಗಳಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ (ಮಾಹಿತಿಯನ್ನು ಒದಗಿಸುವುದು) | |
| (ಊ) | ಒತ್ತುವರಿಗೆ ಕಾರಣರಾದ ಅಥವಾ ಇದುವರೆಗೂ ತೆರವು ಕ್ರಮ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮಗಳೇನು: | ಸರ್ಕಾರಿ ಉದ್ದೇಶಕ್ಕಾಗಿ ಕಾಯ್ದಿರಿಸಲಾದ ನಿವೇಶನಗಳು ಒತ್ತುವರಿಯಾಗದೇ ಇರುವುದರಿಂದ ಹಾಗೂ ಒತ್ತುವರಿ ತೆರವುಗೊಳಿಸುವಂತೆ ಕೋರಿ ಗ್ರಾಮಸ್ಥರು ಯಾವುದೇ ಅರ್ಜಿ ಸಲ್ಲಿಸದೇ ಇರುವುದರಿಂದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ |
| (ಋ) | ನಿಗದಿತ ದಿನಾಂಕದೊಳಗೆ ಅಳತೆ ಕಾರ್ಯನಿರ್ವಹಿಸಿ ಖಾಸಗಿ ತೆರವುಗೊಳಿಸಿ, ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಳ್ಳಲಾಗುವುದೇ? (ಮಾಹಿತಿ ನೀಡುವುದು) | |

**ಸಂಖ್ಯೆ: ಆರ್‌ಡಿ 09 ಎಕ್ಯೂಎಂಎ 2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು